**ವಿಶ್ವ ಖ್ಯಾತಿಯ ಯಕ್ಷಿಣಿಗಾರ – ಕರ್ನಾಟಕದ ಪ್ರೊಫೆಸರ್ ಶಂಕರ್**

ಗಿಲಿ ಗಿಲಿ ಮ್ಯಾಜಿಕ್, "ಮಾಯಾ" ಕಿತ್ತೂರು ಚೆನ್ನಮ್ಮ ರಸ್ತೆ, ಅಜ್ಜರಕಾಡು, ಉಡುಪಿ–576101

**ವೈಯಕ್ತಿಕ ವಿವರಗಳು :**

ಹೆಸರು: ಶಿಮಲಡ್ಕ ಶಂಕರನಾರಾಯಣ ಭಟ್ AKA ಪ್ರೊಫೆಸರ್ ಶಂಕರ್

ಜನನ : ಮೇ 5, 1951, ಬದಿಯಡ್ಕ, ಕಾಸರಗೋಡು, ಗಡಿನಾಡು ಕರ್ನಾಟಕ

ತಂದೆ–ತಾಯಿ : ಶಿಮಲಡ್ಕ ಶಾಂಭಟ್ಟ ಮತ್ತು ಪರಮೇಶ್ವರಿ

ಕುಟುಂಬದ ಉದ್ಯೋಗ : ಮಧ್ಯಮ ವರ್ಗದ ಅವಿಭಕ್ತ ಹವ್ಯಕ ಕೃಷಿಕ ಕುಟುಂಬ

ಹುಟ್ಟೂರು : ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ

**ವಿದ್ಯಾಭ್ಯಾಸ :**

ಪ್ರಾಥಮಿಕ : ಗೇರುಕಟ್ಟೆ ಸರಕಾರಿ ಶಾಲೆ (ಕನ್ನಡ ಮಾಧ್ಯಮ), ಬೆಳ್ತಂಗಡಿ, ದ. ಕ.

ಮಾಧ್ಯಮಿಕ : ಬೆಳ್ತಂಗಡಿ ಸರಕಾರಿ ಶಾಲೆ (ಕನ್ನಡ ಮಾಧ್ಯಮ), ದ. ಕ.

ಪಿ. ಯು. ಸಿ. : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ದ. ಕ.

ಪದವಿ : ಮನಃಶಾಸ್ತ್ರದಲ್ಲಿ ಬಿ.ಎ., ಮಹಾರಾಜ ಕಾಲೇಜು, ಮೈಸೂರು (1972)

**ಉದ್ಯೋಗ :** 1974ರಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಔದ್ಯಮಿಕ ಯಕ್ಷಿಣಿಗಾರನಾಗಿ ನೇಮಕ
2001ರಲ್ಲಿ ಸ್ವಯಂ ನಿವೃತ್ತಿ

ಪತ್ನಿ : ಲಕ್ಷ್ಮೀ ಶಂಕರ್

ಮಗ–ಸೊಸೆ ತೇಜಸ್ವಿ (ಜ್ಯೂನಿಯರ್ ಶಂಕರ್), ಮೈಥಿಲಿ

ಮೊಮ್ಮಗ : ವರ್ಚಸ್ವಿ

ಮಗಳು–ಅಳಿಯ: ಯಶಸ್ವಿನಿ–ಭಾರವಿ ದೇರಾಜೆ

ಮೊಮ್ಮಗಳು: ನೀಹಾರಿಕ

ಗಿಲಿ ಗಿಲಿ ಮ್ಯಾಜಿಕ್ ಪ್ರದರ್ಶನದಲ್ಲಿ ಎರಡೂ ಕುಟುಂಬದ ಸದಸ್ಯರು ಸಕ್ರಿಯವಾಗಿ ಭಾಗವಹಿಸುವ ವಿಶೇಷತೆ
ಬಾಲ್ಯ ಸ್ನೇಹಿತ ಮೂರ್ತಿ ದೇರಾಜೆಯವರ ಮಗಳು ಮೈಥಿಲಿಯೊಂದಿಗೆ ಮಗ ತೇಜಸ್ವಿಯ ವಿವಾಹ ಹಾಗೂ ಅವರ ಮಗ ಭಾರವಿ ದೇರಾಜೆಯೊಡನೆ ಮಗಳು ಯಶಸ್ವಿನಿಯ ವಿವಾಹ ನೆರವೇರಿಸುವುದರ ಮೂಲಕ ಸ್ನೇಹ–ಸಂಬಂಧಗಳ ಅಪೂರ್ವ ಮಿಲನ.

ಮೂರ್ತಿ ದೇರಾಜೆಯವರು ಮಕ್ಕಳಾದ ಭಾರವಿ, ಪಾಣಿನಿ ಮತ್ತು ಸ್ನೇಹಿತ ಚಿದಂಬರ್ ಕಾಕತ್ಕರ್ ಸಹಯೋಗದೊಂದಿಗೆ ಉತ್ಕೃಷ್ಟವಾದ ಹಿನ್ನೆಲೆ ಸಂಗೀತವನ್ನು ನೀಡುವುದರ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ನೀಡುತ್ತಿದ್ದಾರೆ.

**ಜಾದೂರಂಗಪ್ರವೇಶ**

ಬೀದಿ ಬದಿಯ ಜಾದೂಗಾರರು ಹಾಗೂ ಡೊಂಬರಾಟದವರಿಂದ ಪ್ರೇರಣೆ. ಶಾಲಾ ದಿನಗಳಲ್ಲಿಯೇ ಜಾದುವಿನ ಬಗ್ಗೆ ಆಸಕ್ತಿ.

ಯಾವುದೇ ಗುರುವಿನ ಸಹಾಯವಿಲ್ಲದೇ, ಸ್ವಪ್ರಯತ್ನದಿಂದ ಹಂತ–ಹಂತವಾಗಿ ಜಾದೂಕಲಿಕೆ.

14ನೇ ವರ್ಷ ಪ್ರಾಯದಲ್ಲಿ ಬೆಳ್ತಂಗಡಿಯಲ್ಲಿ ಸಾರ್ವಜನಿಕ ಜಾದೂ ಪ್ರದರ್ಶನ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಪ್ರಥಮ ಜಾದೂಗಾರನೆಂಬ ಹೆಗ್ಗಳಿಕೆ.

1968ರಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಜಾದೂಗಾರರ ಸಮ್ಮೇಳನಕ್ಕೆ ಕರ್ನಾಟಕದಿಂದ ಆಯ್ಕೆ.

ಭಾರತದ ಜಾದೂ ಪಿತಾಮಹ – ಪದ್ಮಶ್ರೀ ಪಿ. ಸಿ. ಸರ್ಕಾರ್(ಈಗ ದಿವಂಗತ) ಮತ್ತು ಅಖಿಲ ಭಾರತ ಜಾದೂಗಾರರ ಸಂಘದಿಂದ 'ಪ್ರೊಫೆಸರ್'ಬಿರುದು.

1971-72ರಲ್ಲಿ ಸಮ್ಮೋಹನ ವಿದ್ಯೆ – 'ಹಿಪ್ನೋಟಿಸಮ್' ನಲ್ಲಿ ಪರಿಣತಿಯನ್ನು ಪಡೆದು ಹಲವಾರು ಜನರ ಮಾನಸಿಕ ಒತ್ತಡ, ಭ್ರಮೆ, ದುಶ್ಚಟಗಳನ್ನು ಬಿಡಿಸುವ ಪ್ರಯತ್ನ.

**ಉದ್ದೇಶಭರಿತ ಜಾದೂ:**

- **ಇಂಡಸ್ಟ್ರಿಯಲ್ ಮ್ಯಾಜಿಕ್: ಪ್ರಪಂಚದ ಪ್ರಥಮ ಇಂಡಸ್ಟ್ರಿಯಲ್ ಮ್ಯಾಜಿಶಿಯನ್:**
  ಬ್ಯಾಂಕ್‌ನ ಪ್ರತಿಯೊಂದು ಉಳಿತಾಯ ಖಾತೆ ಮತ್ತು ಸೇವಾ ಯೋಜನೆಗಳ ಬಗ್ಗೆ ಜಾದೂ ಮೂಲಕ ಜನಸಾಮಾನ್ಯರಿಗೆ ಆಯಾ ರಾಜ್ಯದ ಭಾಷೆಯಲ್ಲಿ ಪರಿಪೂರ್ಣ ಮಾಹಿತಿ ನೀಡಿ ಜನರು ಸ್ವಯಂಪ್ರೇರಿತರಾಗಿ ಉಳಿತಾಯ ಖಾತೆಗಳನ್ನು ತೆರೆಯಲು ಪ್ರೇರೇಪಣೆ ನೀಡುವ ಈ ಕಾರ್ಯಕ್ರಮವನ್ನು ಸಿಂಡಿಕೇಟ್ ಬ್ಯಾಂಕ್ ವಿಶ್ವದಲ್ಲೇ ಪ್ರಥಮ ಬಾರಿಗೆ ಅಳವಡಿಸಿಕೊಂಡು ದೇಶದ ಉದ್ದಗಲಕ್ಕೂ ಆಯೋಜಿಸಿತ್ತು.
- **ಕಾರ್ಗಿಲ್ ಜಾದೂ ಅಭಿಯಾನ:**
  ಪಾಕಿಸ್ಥಾನದಲ್ಲಿರುವ ಭಾರತೀಯರ ಮೇಲೆ ನಡೆಯುವ ದೌರ್ಜನ್ಯ
  ಗಡಿ ಅತಿಕ್ರಮಣ
  ಪಾಕಿಸ್ಥಾನೀಯರ ಆಮಿಷಕ್ಕೊಳಗಾದ ಭಾರತೀಯ ಅಧಿಕಾರಿಗಳ ಮುಖೇನ ನಡೆಯುತ್ತಿರುವ ಮಿಲಿಟರಿ ಮಾಹಿತಿ ಸೋರಿಕೆ
  ಕಾರ್ಗಿಲ್ ನಿಧಿಗೆ ಜನಸಾಮಾನ್ಯರು ನೀಡುವ ದೇಣಿಗೆಯ ಮಹತ್ವ
  ಈ ಅಂಶಗಳನ್ನು ಒಳಗೊಂಡ ಜಾದೂ ಕಾರ್ಯಕ್ರಮಗಳಿಂದ ಸ್ವಯಂಪ್ರೇರಿತರಾಗಿ ಕಾರ್ಗಿಲ್ ನಿಧಿಗೆ ದೇಣಿಗೆ ನೀಡುವಂತೆ ಮಾಡಿದ ಪ್ರಯತ್ನ
  ಕಾರ್ಗಿಲ್ ಯುದ್ಧದ ತೀವ್ರತೆಯನ್ನು ವಿವಿಧ ಜಾದೂ ತಂತ್ರಗಳ ಮೂಲಕ ಪ್ರತಿಬಿಂಬಿಸುವ ಈ ಕಾರ್ಯಕ್ರಮ ನಾಡಿನೆಲ್ಲೆಡೆ ಹಾಗೂ ಮುಖ್ಯವಾಗಿ ಬೆಂಗಳೂರಿನ ವಿಧಾನ ಸೌಧದಲ್ಲೂ ಪ್ರದರ್ಶಿತವಾಗಿತ್ತಲ್ಲದೇ ನಿಧಿ ಸಂಗ್ರಹ ಕಾರ್ಯದಲ್ಲೂ ಸಹಕರಿಸಿತ್ತು.
- **ರಾಷ್ಟ್ರೀಯತೆ ಸಾರುವ ಜಾದೂ–**
  ಸರಕಾರದ ಹಲವಾರು ಧ್ಯೇಯೋದ್ದೇಶ, ಯೋಜನೆಗಳ ಪ್ರಚಾರಕ್ಕಾಗಿ ವಿಶೇಷ ಕಾರ್ಯಕ್ರಮಗಳ ವಿನ್ಯಾಸ
  ರಾಷ್ಟ್ರೀಯ ಭಾವೈಕ್ಯತೆ, ಜಾತ್ಯಾತೀತತೆ ಮತ್ತು ವಿಶ್ವಶಾಂತಿಯ ಮಹತ್ವಗಳನ್ನು ಜಾದೂ ಮೂಲಕ ದೇಶದುದ್ದಗಲಕ್ಕೂ ಸಾರುವ ಕಾರ್ಯಕ್ರಮ **'ವಂದೇ ಮಾತರಂ'.**
- **ಹಾಸ್ಪಿಟಲ್ ಜಾದೂ:**
  ಆಸ್ಪತ್ರೆ ಮತ್ತು ವೃದ್ಧಾಶ್ರಮಗಳಲ್ಲಿ ರೋಗಿಗಳ ಮನರಂಜಿಸಿ ಶೀಘ್ರ ಗುಣಮುಖರಾಗಲು ಪ್ರೇರೇಪಿಸುವಂತಹ ಜಾದೂಗಳು
  ರೋಗಿಗಳ ಪ್ರತ್ಯೇಕ ಆರೈಕೆ–ಚಿಕಿತ್ಸೆಗಳಿಗೆ ಸಹಾಯವಾಗುವಂತಹ ವಿಶೇಷ ಜಾದೂಗಳು.
  ಅಮೇರಿಕಾದ ಬ್ರಾಂಕ್ಸ್ ಲೆಬನಾನ್ ಮಾನಸಿಕ ಆಸ್ಪತ್ರೆ, ದೆಹಲಿಯ ಗಂಗಾರಾಂ ಆಸ್ಪತ್ರೆ, ಬೆಳಗಾವಿಯ KLE ಆಸ್ಪತ್ರೆ, ಮಣಿಪಾಲದ KMC ಆಸ್ಪತ್ರೆಗಳಲ್ಲಿ ಯಶಸ್ವಿ ಪ್ರಯೋಗ

- **ಜನ ಜಾಗೃತಿ ಜಾದೂ:**

ಮಾಟ, ಮಂತ್ರ, ಪವಾಡಗಳ ಬಗ್ಗೆ ಜನರಿಗೆ ಎಚ್ಚರಿಕೆ ನೀಡುವ ಜನ ಜಾಗೃತಿ ಕಾರ್ಯಕ್ರಮಗಳು
ಮಂಗಳೂರಿನಿಂದ ಕಾರವಾರದವರೆಗೆ ಸುಮಾರು 270 ಕಿ.ಮೀ.ಗಳನ್ನು ಕಣ್ಣಿಗೆ ಬಟ್ಟೆ ಕಟ್ಟಿ ಸ್ಕೂಟರಿನಲ್ಲಿ ಕ್ರಮಿಸಿ ಏಡ್ಸ್ ಮತ್ತು ಅಮಲು ಪದಾರ್ಥ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ
ಧರ್ಮಸ್ಥಳದ ಜನಜಾಗೃತಿ ವೇದಿಕೆ ಏರ್ಪಡಿಸುವ ಮದ್ಯವರ್ಜನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಕುಡಿತ ಹಾಗೂ ಸಿಗರೇಟ್ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜಾದೂ ಮೂಲಕ ವಿವರಣೆ
ಕರ್ನಾಟಕ ಪೊಲೀಸ್ ಇಲಾಖೆ ಪ್ರಾಯೋಜಿಸುವ ಅಪರಾಧ ತಡೆ ಸಪ್ತಾಹದಲ್ಲಿ 'ಅಪರಾಧ ತಡೆ' ಜಾದೂ, ಪರಿಸರ ರಕ್ಷಣೆ ಬಗ್ಗೆ ಜಾದೂ
ಖಾಸಗಿ ಫೈನಾನ್ಸ್ ಸಂಸ್ಥೆಗಳು ಯಾವ ರೀತಿ ಅಮಾಯಕರನ್ನು ವಂಚಿಸುತ್ತವೆ ಎಂಬುದರ ಬಗ್ಗೆ ವಿಶೇಷ ಜಾದೂ

- **'ಜಾಗೃತಿಗಾಗಿ ಜಾದೂ' – ಆಧ್ಯಾತ್ಮಿಕ ಜಾದೂ ಪ್ರದರ್ಶನ.**
  ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಸ್ಥೆಯ ಸಹಯೋಗ ಮತ್ತು ಪ್ರಾಯೋಜಕತ್ವದಲ್ಲಿ 'ಜಾಗೃತಿಗಾಗಿ ಜಾದೂ' ಎಂಬ 2 ಗಂಟೆ ಅವಧಿಯ ಉಚಿತ ಆಧ್ಯಾತ್ಮಿಕ ಜಾದೂ ಪ್ರದರ್ಶನ.
  ಜನರಲ್ಲಿ ಆಧ್ಯಾತ್ಮ, ವಿಶ್ವಶಾಂತಿ ಮತ್ತು ವಿಶ್ವಭಾತೃತ್ವದ ಬಗ್ಗೆ ಒಲವನ್ನು ಮೂಡಿಸುವ ಸಲುವಾಗಿ ಮಾಡಿದ ಪ್ರಯತ್ನ
  ದೆಹಲಿ, ಹರಿಯಾಣ, ಉತ್ತರಪ್ರದೇಶ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಆಂದ್ರ ಹಾಗೂ ಕೇರಳ ರಾಜ್ಯಗಳಲ್ಲಿ ಈ 'ಆಧ್ಯಾತ್ಮಿಕ ಜಾದೂ'ವಿನ ಪ್ರದರ್ಶನ.
  **ದೆಹಲಿಯ ತಿಹಾರ್ ಜೈಲಿನಲ್ಲಿ ಕೈದಿಗಳ ಮನಪರಿವರ್ತನೆಗಾಗಿ** 'ಜಾಗೃತಿಗಾಗಿ ಜಾದೂ' ಆಧ್ಯಾತ್ಮಿಕ ಜಾದೂ ಕಾರ್ಯಕ್ರಮದ ಪ್ರದರ್ಶನ.
  ಸುವರ್ಣ ಕರ್ನಾಟಕ ಅಂಗವಾಗಿ ಕರ್ನಾಟಕದ ಎಲ್ಲಾ ಜಿಲ್ಲಾಮತ್ತು ತಾಲೂಕು ಕೇಂದ್ರಗಳಲ್ಲಿ ವರ್ಷಪೂರ್ತಿ ಪ್ರದರ್ಶನ

- **ಶಿಕ್ಷಣಕ್ಕಾಗಿ ಜಾದೂ**
  ಶಾಲಾ ಕಾಲೇಜುಗಳಲ್ಲಿ ಮನೋರಂಜನಾ ಕಾರ್ಯಕ್ರಮದ ಜೊತೆಜೊತೆಗೆ ಹಲವಾರು ಶೈಕ್ಷಣಿಕ ಅಂಶಗಳನ್ನೊಳಗೊಂಡ ಜಾದೂಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳ ಶೀಘ್ರ ಕಲಿಕೆ ಹಾಗೂ ನೆನಪುಶಕ್ತಿ ಹೆಚ್ಚಿಸಲು ನೆರವು
  2007ರಲ್ಲಿ ಬೆಂಗಳೂರು ಪುರಭವನದಲ್ಲಿ ಪ್ರಜಾವಾಣಿ ಪ್ರಾಯೋಜಕತ್ವದಲ್ಲಿ 15000ಕ್ಕೂ ಮಿಕ್ಕಿ ಶಾಲಾ ಮಕ್ಕಳಿಗೆ ಉಚಿತ ಕಾರ್ಯಕ್ರಮ

**ಪ್ರಶಸ್ತಿ.– ಪುರಸ್ಕಾರ**

- **ಯುಗಾದಿ ಪುರಸ್ಕಾರ** – ಮದರಾಸು ತೆಲುಗು ಅಕಾಡಮಿ, 2000
- ಅಮೇರಿಕಾದ ಅಂತಾರಾಷ್ಟ್ರೀಯ ಜಾದೂಗಾರರ ಸಂಘ ಜಾದೂಕ್ಷೇತ್ರದಲ್ಲಿ ನೀಡಿದ ದೀರ್ಘಕಾಲದ ಸೇವೆಯನ್ನು ಪರಿಗಣಿಸಿ ನೀಡುವ ಪ್ರಸಿದ್ಧ **ಮರ್ಲಿನ್ ಪ್ರಶಸ್ತಿ**– 2004

- ಮಣಿಪಾಲದಲ್ಲಿ Lifetime Achievement Award - 2000
- ಅಖಿಲ ಭಾರತ ಜೇಸೀಸ್ ಸಂಸ್ಥೆಯವರು ನೀಡುವ ಕಮಲಪತ್ರ ಪ್ರಶಸ್ತಿ. 1990-91
- 1997 ರಲ್ಲಿ ಸುಪ್ರಸಿದ್ಧ ಸಾಹಿತಿ ಡಾ. ಶಿವರಾಮ ಕಾರಂತರಿಗೆ ಕರ್ನಾಟಕ ಸರಕಾರವು ಸನ್ಮಾನಿಸಿ ನೀಡಿದ್ದ ಮೈಸೂರು ಪೇಟವನ್ನು 'ಒಬ್ಬ ಅರ್ಹ ಸಾಧಕನಿಗೆ ನೀಡಬೇಕೆಂದು ಬಯಸುತ್ತಿದ್ದೆ. ಹಾಗೇ ಜಾದೂಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ನಿಮಗೆ ಇದನ್ನು ತೊಡಿಸುತ್ತಿದ್ದೇನೆ' ಎಂದು ತೊಡಿಸಿ ಸನ್ಮಾನಿಸಿದ್ದು ಬೇರೆ ಎಲ್ಲಾ ಪ್ರಶಸ್ತಿ–ಸಮ್ಮಾನಗಳಿಂದಲೂ ಮಿಗಿಲಾದುದು.

**ಅಪಾಯಕಾರೀ ಚಮತ್ಕಾರಗಳು:**

ಸಾಮಾನ್ಯವಾಗಿ ಜಾದೂಗಾರರು ಕಣ್ಣಿಗೆ ಕಟ್ಟುವ ಬಟ್ಟೆಯ ಮುಸುಕಿನ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಬಳಸುವ ಪ್ಲಾಸ್ಟರ್ ಬ್ಯಾಂಡೇಜ್ ಕಟ್ಟಿ ಜನನಿಬಿಡ ರಸ್ತೆಯಲ್ಲಿ ಸ್ಕೂಟರ್ ಸವಾರಿ

ಜೀವಂತ ಸಮಾಧಿ.  ಬೆಂಕಿ, ಬ್ಲೇಡ್ ಮತ್ತು ಬಲ್ಬುಗಳನ್ನು ತಿನ್ನುವುದು

ಅಂದಿನ ದಿನಗಳಲ್ಲಿಯೇ ಕೋವಿಯಿಂದ ಹೊಡೆದ ಗುಂಡನ್ನು ಅಂಗೈಯಲ್ಲಿ ತಡೆಹಿಡಿದು "ಬುಲೆಟ್ ಪ್ರೂಫ್ ಮ್ಯಾಜೀಶಿಯನ್" ಎಂಬ ಖ್ಯಾತಿ

**ಸಾಧನೆಗಳು:**

ಭಾರತದಾದ್ಯಂತ ಮಾತ್ರವಲ್ಲದೆ ಸಂಯುಕ್ತ ಅರಬ್ ರಾಷ್ಟ್ರಗಳು, ಅಮೇರಿಕಾ, ಇಂಗ್ಲೆಂಡ್, ಅಯರ್ಲೇಂಡ್, ಸ್ವಿಜರ್ಲೇಂಡ್, ಜರ್ಮನಿ, ಮಾರಿಶಸ್, ಶ್ರೀಲಂಕಾ ಮುಂತಾದ ರಾಷ್ಟ್ರಗಳಲ್ಲಿ **10000**ಕ್ಕೂ ಮಿಕ್ಕಿ ಕಾರ್ಯಕ್ರಮಗಳ ಪ್ರದರ್ಶನ

1977, 1978, 1984, 1991 ಹಾಗೂ 1992 ರಲ್ಲಿ ಅರಬ್ ರಾಷ್ಟ್ರಗಳಾದ ದುಬೈ, ಅಬುಧಾಬಿ ಹಾಗೂ ಅಲೈನ್, ಶಾರ್ಜಾ, ಮಸ್ಕತ್, ಸಲಾಲಾಗಳಲ್ಲಿ 80ಕ್ಕೂ ಮಿಕ್ಕಿ ಜಾದೂ ಕಾರ್ಯಕ್ರಮಗಳ ಪ್ರದರ್ಶನ

1977-78 ರ ಅರಬ್ ರಾಷ್ಟ್ರಗಳ ಪ್ರವಾಸದಲ್ಲಿ ಸಂಗ್ರಹಿಸಿದ ನಿಧಿಯಿಂದ ಪುತ್ತೂರಿನ ಸೈಂಟ್ ಫಿಲೋಮಿನಾ ಹೈಸ್ಕೂಲಿಗೊಂದು ರಂಗಮಂಟಪದ ಕೊಡುಗೆ

ದುಬೈ ಕರ್ನಾಟಕ ಸಂಘದ ಸ್ವಂತ ಕಟ್ಟಡ ಸಹಾಯಾರ್ಥ ಕಾರ್ಯಕ್ರಮ

ಅಮೇರಿಕಾದ ನ್ಯೂಯಾರ್ಕ್, ಪಿಟ್ಸ್‌ಬರ್ಗ್, ಹ್ಯೂಸ್ಟನ್‌ಗಳಲ್ಲಿ 25 ಕ್ಕೂ ಮಿಕ್ಕಿ ಕಾರ್ಯಕ್ರಮ

ಹ್ಯೂಸ್ಟನ್ ಮೀನಾಕ್ಷಿ ದೇವಾಲಯದ ಸಹಾಯಾರ್ಥ ಕಾರ್ಯಕ್ರಮ

ಸ್ವಿಜರ್‌ಲೇಂಡ್‌ನ ಜಿನೇವಾ, ಜ್ಯೂರಿಕ್‌ಗಳಲ್ಲಿ ಪ್ರದರ್ಶನ

ರೋಟರಿ, ಲಯನ್ಸ್, ಜೇಸೀಸ್ ಮುಂತಾದ ಸಂಘ ಸಂಸ್ಥೆಗಳ ಸಾಮಾಜಿಕ ಕಾರ್ಯಗಳ ಸಹಾಯಾರ್ಥ, ದೇವಸ್ಥಾನ, ಇಗರ್ಜಿಗಳ ಜೀರ್ಣೋದ್ಧಾರದ ಸಹಾಯಾರ್ಥ, ಶಾಲಾ ಕಾಲೇಜುಗಳ ಕಟ್ಟಡಗಳ ಸಹಾಯಾರ್ಥ ಹಲವಾರು ಪ್ರದರ್ಶನಗಳು.

ಬುದ್ಧಿಮಾಂದ್ಯ ಮಕ್ಕಳ ಶಾಲೆಗಳಲ್ಲಿ ಉಚಿತ ಪ್ರದರ್ಶನಗಳು.

ದಿಲ್ಲಿಯ ಚಾಂದಿನಿ ಚೌಕ್‌ನಿಂದ ರಾಜ್‌ಘಾಟ್ ವರೆಗೆ ಕಣ್ಣಿಗೆ ಪಟ್ಟಿ ಕಟ್ಟಿ ಸ್ಕೂಟರ್ ಚಲಾಯಿಸಿ ಗಾಂಧಿ ಸಮಾಧಿಯ ಮೇಲೆ ಪುಷ್ಪಗುಚ್ಛ ಇರಿಸಿ ವಿಶ್ವ ಶಾಂತಿ ದಿನಾಚರಣೆ.

ಅಮೇರಿಕಾದ ವಿಶನ್ ಆಫ್ ಏಶಿಯಾ ಟಿ.ವಿ, ಬಿ.ಬಿ.ಸಿ ಲಂಡನ್, ಇನ್‌ಫ್ಲೈಟ್ ಪ್ರೊಡಕ್ಷನ್–ಲಂಡನ್, ಮಾರಿಶಸ್ ಟಿ.ವಿ, ಶ್ರೀಲಂಕಾದ ಸರಕಾರಿ ಮತ್ತು ಖಾಸಗಿ ಟಿ.ವಿ ಚ್ಯಾನಲ್‌ಗಳು, ಆಯರ್‌ಲೇಂಡ್‌ನ ಬೆಲ್‌ಫ್ಲಾಸ್ಟ್ ರೇಡಿಯೋ, ಅಬುಧಾಬಿ ರೇಡಿಯೋಗಳು, ರಾಷ್ಟ್ರೀಯ  ಚ್ಯಾನಲ್‌ಗಳಾದ ದೆಹಲಿ ಹಾಗೂ ಬೆಂಗಳೂರು ದೂರದರ್ಶನ,  ಮಾತ್ರವಲ್ಲದೇ ಉದಯ ಟಿ ವಿ, ಈ ಟಿ.ವಿ ಮೊದಲಾದ ಖಾಸಗಿ ಚ್ಯಾನಲ್‌ಗಳಲ್ಲಿ ಸಂದರ್ಶನ ಹಾಗೂ ಕಾರ್ಯಕ್ರಮಗಳು ಪ್ರಸಾರವಾಗಿವೆ.

ದೇಶದ ನಾನಾ ವಾರಪತ್ರಿಕೆಗಳು ವಿಶೇಷ ಮುಖಪುಟ ಸಂದರ್ಶನ, ಲೇಖನಗಳನ್ನು ಪ್ರಕಟಿಸಿವೆ.
ಕೇಂದ್ರ ಸರಕಾರದ ಸಾಮ್ಯದಲ್ಲಿರುವ ಉತ್ತರ ಭಾರತ ಸಾಂಸ್ಕೃತಿಕ ಕೇಂದ್ರ–(NZCC) ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿ ಜಾದೂ ಕಾರ್ಯಕ್ರಮಗಳನ್ನು ಏರ್ಪಡಿಸಿವೆ. ಜಮ್ಮುವಿನಲ್ಲಿರುವ ಸೇನಾ ಯೋಧರ ನೆಲೆಯಲ್ಲಿ ಕೂಡ ಜಾದೂ ಕಾರ್ಯಕ್ರಮ ನೀಡಲಾಗಿದೆ.

**ಭಾಗವಹಿಸಿದ ಅಂತಾರಾಷ್ಟ್ರೀಯ ಸಮ್ಮೇಳನಗಳು:**

| | |
|---|---|
| ಅಮೇರಿಕಾದ ಅಂತಾರಾಷ್ಟ್ರೀಯ ಜಾದೂಗಾರರ ಸಮ್ಮೇಳನ | ಪಿಟ್ಸ್ ಬರ್ಗ್, 1981 |
| ಅಮೇರಿಕಾ ಜಾದೂಗಾರರ ಸಮ್ಮೇಳನ | ಹ್ಯೂಸ್ಟನ್ ಟೆಕ್ಸಾಸ್,  1982 |
| ವಿಶ್ವ ಜಾದೂಗಾರರ ಸಮ್ಮೇಳನ | ಸ್ವಿಜರ್‌ಲೇಂಡ್ ನ ಲೂಸಾನ್,1991 |
| ಅಮೇರಿಕಾದ ಅಂತಾರಾಷ್ಟ್ರೀಯ ಜಾದೂಗಾರರ ಸಮ್ಮೇಳನ | ಲಾಸ್ ಏಂಜೆಲೀಸ್ 1998 |

**ಆಯೋಜಿಸಿದ ಸಮ್ಮೇಳನಗಳು:**

- 1994 ರಲ್ಲಿ  ಗಿಲಿ ಗಿಲಿ 94 – ರಾಷ್ಟ್ರೀಯ ಜಾದೂಗಾರರ ಸಮ್ಮೇಳನ,– 385 ಜಾದೂಗಾರರ ಪಾಲ್ಗೊಳ್ಳುವಿಕೆ.
- 1997 ರಲ್ಲಿ  ಗಿಲಿ ಗಿಲಿ 97 – ಭಾರತದ ಪ್ರಪ್ರಥಮ ಅಂತಾರಾಷ್ಟ್ರೀಯ ಜಾದೂಗಾರರ ಸಮ್ಮೇಳನ–9 ದೇಶಗಳಿಂದ 525 ಜಾದುಗಾರರ ಪಾಲ್ಗೊಳ್ಳುವಿಕೆ.
- 2001 ಗಿಲಿ ಗಿಲಿ 2001 – ಅಂತಾರಾಷ್ಟ್ರೀಯ ಜಾದೂಗಾರರ ಸಮ್ಮೇಳನ–14 ದೇಶಗಳಿಂದ 629 ಜಾದೂಗಾರರು ಪಾಲ್ಗೊಂಡ ಈ ಸಮ್ಮೇಳನದಲ್ಲಿ ನಡೆದ ಯಕ್ಷಿಣಿ ಕಾರ್ಯಕ್ರಮಗಳನ್ನು ಕರ್ನಾಟಕದ ಜನತೆಗೆ ವೀಕ್ಷಿಸುವ ಸದವಕಾಶ. ಭಾರತದ ಜಾದೂ ಬಗ್ಗೆ ವಿದೇಶದ ಜನರ ಮೆಚ್ಚುಗೆ

ಪ್ರಥಮ ಬಾರಿಗೆ ಭಾರತದ ಬೀದಿ ಜಾದೂಗಾರರನ್ನು ಸಂಘಟಿಸಿ “ಅಖಿಲ ಭಾರತ ಬೀದಿ ಜಾದೂಗಾರರ ಸ್ಪರ್ಧೆ” ಯನ್ನು ಏರ್ಪಡಿಸುವುದರ ಮೂಲಕ ಇದುವರೆಗೆ ಯಾರೂ ಗುರುತಿಸದ ಭಾರತದ  ಸಾಂಪ್ರದಾಯಿಕ ಜಾದೂವಿಗೆ  ವಿಶ್ವ ಮನ್ನಣೆ.
ಈ ಸಮ್ಮೇಳನಗಳಲ್ಲಿ ಭಾರತದ ಬೀದಿ ಜಾದೂಗಾರರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ವೇದಿಕೆಯನ್ನು ಕಲ್ಪಿಸುವುದರ ಮೂಲಕ ನಶಿಸಿ ಹೋಗುತ್ತಿದ್ದ ಭಾರತದ ಬೀದಿ ಜಾದೂವಿಗೆ ನವ ಚೈತನ್ಯ

600 ವರ್ಷಗಳ ನಂತರ ವಿಶ್ವವಿಖ್ಯಾತ ‘ಇಂಡಿಯನ್ ರೋಪ್ ಟ್ರಿಕ್’ ಜಾದೂವಿನ ಮರುಪ್ರದರ್ಶನಕ್ಕೆ ಕಾರಣೀಭೂತ. ನವಂಬರ್ 23, 1997 ರಲ್ಲಿ ಸುಮಾರು 35000 ಜನರು ವೀಕ್ಷಿಸಿದ ಐತಿಹಾಸಿಕ ಪ್ರದರ್ಶನ.

ಅಮೆರಿಕಾದ ಡಾ.ಜಾನ್ ಬೂತ್‌ರವರ ಜಾದೂ ಇತಿಹಾಸಗ್ರಂಥದಲ್ಲಿ ಈ ಅಪರೂಪದ ಕಾರ್ಯಕ್ರಮದ ಬಗ್ಗೆ ಉಲ್ಲೇಖ.

ಕೇವಲ ತನ್ನ ಮನೆಯವರ ಹಾಗೂ ಸ್ನೇಹಿತರ ಸಹಯೋಗದೊಂದಿಗೆ ಈ ಮೂರೂ ಜಾದೂಗಾರರ ಸಮ್ಮೇಳನಗಳನ್ನು ಯಶಸ್ವಿಯಾಗಿ ಆಯೋಜಿಸುವುದರ ಮೂಲಕ ಭಾರತದ ಕೀರ್ತಿ ಪತಾಕೆಯನ್ನು ವಿಶ್ವದಾದ್ಯಂತ ಎತ್ತಿ ಹಿಡಿದಿರುವ ಹೆಮ್ಮೆ

**ಕೇವಲ ಜಾದೂ ಕ್ಷೇತ್ರವಲ್ಲದೇ_. . .**

ತನ್ನ ಬಾಲ್ಯದಲ್ಲಿ ಪ್ರಸಿದ್ಧ ಯಕ್ಷಗಾನ ತಾಳಮದ್ದಳೆ ಅರ್ಥಧಾರಿ ದೇರಾಜೆ ಸೀತಾರಾಮಯ್ಯನವರ ಆದರ್ಶಗಳಿಂದ ಪ್ರೇರಿತರಾಗಿ ಹಲವಾರು ಕಲೆಗಳಲ್ಲಿ ಆಸಕ್ತಿ.

ಶಾಲೆಗಳಲ್ಲಿ ನಡೆಯುವ ಛದ್ಮವೇಷ ಸ್ಪರ್ಧೆಗಳು, ತಿಂಗಳ ಕಾರ್ಯಕ್ರಮಗಳು, ನಾಟಕಗಳು– ಹೀಗೆ ಎಲ್ಲದರಲ್ಲೂ ಸಕ್ರಿಯವಾಗಿ ಭಾಗವಹಿಸುವಿಕೆ.

1967ರಲ್ಲಿ, ತಾನು 10ನೇತರಗತಿಯಲ್ಲಿ ಕಲಿಯುತ್ತಿದ್ದಾಗಲೇ ಸಾಹಸ ಕಾದಂಬರಿ ‘ಬೆನ್ನು ಬಿಡದ ಬೇತಾಳ’ ಪ್ರಕಟ

1972ರ ರಾಜ್ಯದ ಶ್ರೇಷ್ಠ ಚಿತ್ರ ಪುರಸ್ಕಾರ ಪಡೆದ ಕನ್ನಡ ಚಿತ್ರ – **‘ಸಂಕಲ್ಪ’** ದಲ್ಲಿ ನಟನೆ ಹಾಗೂ ಚಿತ್ರದಲ್ಲಿ ಬರುವ ಸಮ್ಮೋಹನ ಚಿಕಿತ್ಸೆ, ಕಥಾ ಭಾಗಕ್ಕೆ ದಿಗ್ದರ್ಶನ.

ಉಡುಪಿಯಲ್ಲಿ ಹಲವಾರು ಜಾದೂ ತರಬೇತಿ ಶಿಬಿರಗಳನ್ನು ನಡೆಸಿ ಯುವ ಜಾದೂಗಾರರ ಬೆಳವಣಿಗೆಗೆ ಪ್ರೋತ್ಸಾಹ, ಹಲವರಿಗೆ ಸ್ವೋದ್ಯೋಗ ನಡೆಸಲು ಸಹಾಯ ಹಸ್ತ.

ಹವಾಯಿ ವಿಶ್ವವಿದ್ಯಾಲಯದ ಡಾ. ಲೀ ಸೀಗಲ್ ಅವರ ‘Net of Magic’ ಸಂಶೋಧನಾಗ್ರಂಥಕ್ಕೆ ಮಾರ್ಗದರ್ಶನ

ಅಮೆರಿಕಾದ ಅಂತಾರಾಷ್ಟ್ರೀಯ ಜಾದೂಗಾರರ ಸಂಘದ ಭಾರತದ ಶಾಖೆಯ ಅಧ್ಯಕ್ಷನಾಗಿ ಆಯ್ಕೆ

ಸುರತ್ಕಲ್ಲಿನ **‘ಚಿರಂತನ’ ವೃದ್ಧಾಶ್ರಮದ ಸಲಹೆಗಾರರಾಗಿ ಕಾರ್ಯ ನಿರ್ವಹಣೆ**

ಜಯಶ್ರೀಕೃಷ್ಣ ಪರಿಸರಪ್ರೇಮಿ ಸಮಿತಿಯ ಜಿಲ್ಲಾ ಕಾರ್ಯದರ್ಶಿಯಾಗಿ ಸಮಿತಿಯ ಚಟುವಟಿಕೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ.